# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 07–03–2017 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು**

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಸಹ ಕಂದಾಯ ಅಧಿಕಾರಿ(ಪೂರ್ವ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಕಂದಾಯ ಪರಿವೀಕ್ಷಕರು,ವಾರ್ಡ್–160 |
| 3. | ಎನ್.ಉಮಾ | – ಸದಸ್ಯರು | ಮೌಲ್ಯಮಾಪಕರು(ಬೊಮ್ಮನಹಳ್ಳಿ) |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | ಕಂದಾಯ ಪರಿವೀಕ್ಷಕರು(ಪಶ್ಚಿಮ) |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | ಕಂದಾಯ ಪರಿವೀಕ್ಷಕರು(ದಕ್ಷಿಣ) |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿ/ಸಿಬ್ಬಂದಿಗಳಿಗೆ ಸ್ವಾಗತ ಕೋರಿ, ತಮ್ಮ ಪರಿಚಯವನ್ನು ಮಾಡಿಕೊಂಡು ನಂತರ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿ/ಸಿಬ್ಬಂದಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಳ್ಳುವಂತೆ ಕೋರಿದರು. ಅದರಂತೆ, ಹಾಜರಿದ್ದ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು.

ಅಧ್ಯಕ್ಷರು ಮಾತನಾಡುತ್ತಾ ಮಾರುಕಟ್ಟೆ ವಿಭಾಗಕ್ಕೆ ಸಂಬಂಧಿಸಿದಂತೆ 2006–07ನೇ ಸಾಲಿನಿಂದ 2013–14ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ, ವಸೂಲಾತಿ ಮೊತ್ತ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಚರ್ಚಿಸುವ ಸಲುವಾಗಿ ಸಭೆಯನ್ನು ಕರೆದಿರುವುದಾಗಿ, ಅದರಂತೆ ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳು ತಮ್ಮ ಕಛೇರಿಗೆ ಸಂಬಂಧಪಟ್ಟಂತೆ 2006–07ನೇ ಸಾಲಿನಿಂದ 2013–14ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಗೆ ಸಂಬಂಧಿಸಿದಂತೆ ವಿವರವಾದ ವರದಿಯ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸಲಾಯಿತು.

ಅದರಂತೆ ಹಾಜರಿದ್ದ ಪಶ್ಚಿಮ ವಲಯ ಕಂದಾಯ ಪರಿವೀಕ್ಷಕರವರು ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಒಟ್ಟು 48 ಮಾರುಕಟ್ಟೆಗಳಿದ್ದು, ಸದರಿ ಮಾರುಕಟ್ಟೆಗಳಲ್ಲಿ 2920 ಮಳಿಗೆಗಳು ಇರುವುದಾಗಿ ಮಾಹಿತಿ ನೀಡುತ್ತಾ, ಸುಮಾರು 40-50 ವರ್ಷಗಳಿಂದ ಮಾರುಕಟ್ಟೆಗಳ ಲೈಸನ್ಸ್‌ಗಳನ್ನು ನವೀಕರಿಸಿರುವುದಿಲ್ಲವೆಂದು, ಮಳಿಗೆಗಳ ಮಾಲೀಕರು ಮಳಿಗೆಗಳನ್ನು ಒಳಬಾಡಿಗೆಗೆ ನೀಡಿರುತ್ತಾರೆಂದು ತಿಳಿಸಿದರು ಹಾಗೂ ದಿನಾಂಕ:01-01-2014ರಿಂದ ತೆರಿಗೆಯನ್ನು ನಿಗದಿಪಡಿಸಿದ್ದು, ತೆರಿಗೆಯನ್ನು ಪಾವತಿಸದೇ ಮಳಿಗೆಗಳ ಮಾಲೀಕರು ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿರುತ್ತಾರೆಂದು ಹಲವಾರು ಮಾರುಕಟ್ಟೆಗಳು ಶಿಥಿಲಾವಸ್ಥೆಯಲ್ಲಿದ್ದು, ಅವುಗಳನ್ನು ಕೆಡವಲು ಆದೇಶವಾಗಿರುವುದಾಗಿ ಮಾಹಿತಿ ನೀಡಿದರು.

ನಂತರ ಶ್ರೀ ಗೌತಮ್‌ಕುಮಾರ್.ಎಂ, ಸದಸ್ಯರು ಮಾತನಾಡುತ್ತಾ ಕೆ.ಆರ್.ಮಾರುಕಟ್ಟೆಗೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ವಾರ್ಷಿಕ ಎಷ್ಟು ಬಾಡಿಗೆಯನ್ನು ವಸೂಲು ಮಾಡಲು ಗುರಿ ನಿಗಧಿಪಡಿಸಲಾಗಿದೆ ಎಂಬುದರ ಮಾಹಿತಿಯನ್ನು ಕೇಳಿದಾಗ, ಹಾಜರಿದ್ದ ಕಂದಾಯ ಪರಿವೀಕ್ಷಕರು ವಾರ್ಷಿಕ ರೂ.17.00ಕೋಟಿ ವಸೂಲಾತಿ ಗುರಿ ಇದ್ದು, ಪ್ರಸ್ತುತ ರೂ.3.71ಕೋಟಿ ವಸೂಲಾಗುತ್ತಿರುವುದಾಗಿ ತಿಳಿಸಿದರು. ಇದಕ್ಕೆ ಸದಸ್ಯರು ಉಳಿದ ಮೊತ್ತದ ವಸೂಲಾತಿಗೆ ಕೈಗೊಂಡಿರುವ ಕ್ರಮದ ಮಾಹಿತಿ ಹಾಗೂ ಮಳಿಗೆಗಳಿಗೆ ಸಂಬಂಧಿಸಿದಂತೆ ಮೂಲ ಕರಾರುಪತ್ರಗಳು ಇರುವ ಬಗ್ಗೆ ಹಾಗೂ ಈ ಕರಾರು ಪತ್ರಗಳು ಯಾರ ಸುಪರ್ದಿನಲ್ಲಿರುತ್ತವೆ ಎಂಬುದರ ಮಾಹಿತಿಯನ್ನು ನೀಡಲು ಸೂಚಿಸಿದಾಗ, ಮಳಿಗೆಗಳ ಮಾಲೀಕರುಗಳಿಗೆ ನೋಟೀಸ್ ಜಾರಿ ಮಾಡಿರುವುದಾಗಿ ತಿಳಿಸಿದರು. ಮಳಿಗೆಗಳಿಗೆ ಸಂಬಂಧಪಟ್ಟಂತೆ ಮೂಲ ಕರಾರು ಪತ್ರಗಳು/ದಾಖಲಾತಿಗಳು ಲಭ್ಯವಿರುವುದಿಲ್ಲವೆಂದು, ಪ್ರಸ್ತುತ ಮಳಿಗೆಗಳ ಮಾಲೀಕರುಗಳಿಂದ ದಾಖಲಾತಿಗಳನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ಹಾಜರಿದ್ದ ಸಹ ಕಂದಾಯ ಅಧಿಕಾರಿಯವರು ಪೂರ್ವ ವಲಯ ವ್ಯಾಪ್ತಿಯಲ್ಲಿ ಒಟ್ಟು 47 ಮಾರಕಟ್ಟೆಗಳಿದ್ದು, ಒಟ್ಟು 1742 ಮಳಿಗೆಗಳು ಇದ್ದು ಈ ಎಲ್ಲಾ ಮಳಿಗೆಗಳು ಶಿಥಿಲಗೊಂಡಿದ್ದು, ಸದರಿ ಮಾರುಕಟ್ಟೆಗಳನ್ನು ಹೊಡೆಯಲು ಆದೇಶವಾಗಿದ್ದು, ಆದರೆ, ಮಳಿಗೆಗಳನ್ನು ಮಾಲೀಕರುಗಳು ಖಾಲಿ ಮಾಡುತ್ತಿರುವುದಿಲ್ಲವೆಂದು ಹಾಗೂ ವಾರ್ಷಿಕ ರೂ.19.83ಕೋಟಿ ವಸೂಲಾತಿ ಗುರಿ ಇರುವುದಾಗಿ ತಿಳಿಸಿದರು.

ತದನಂತರ ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಮಾತನಾಡುತ್ತಾ ಪೂರ್ವ ವಲಯ ವ್ಯಾಪ್ತಿಯಲ್ಲಿರುವ ವಾಹನ ನಿಲ್ದಾಣಗಳ ವಿವರಗಳು, ಇವುಗಳಿಂದ ವಸೂಲಾಗುತ್ತಿರುವ ಮೊತ್ತದ

ವಿವರಗಳ ಮಾಹಿತಿಯನ್ನು ಕೇಳಿದಾಗ, ಪೂರ್ವ ವಲಯದಲ್ಲಿ ಗರುಡ ಮಾಲ್, ಪಿಯುಬಿ ಬಿಲ್ಡಿಂಗ್‌ನಲ್ಲಿ ವಾಹನ ನಿಲ್ದಾಣ ಇದ್ದು, ಇವುಗಳನ್ನು ಖಾಸಗಿಯವರಿಗೆ ನಿರ್ವಹಣೆಗಾಗಿ ಗುತ್ತಿಗೆ ನೀಡಿದ್ದು, ಇವುಗಳಿಂದ ವಸೂಲಾಗುವ ಮೊತ್ತದಲ್ಲಿ ಕರಾರಿನಂತೆ ಹಣವನ್ನು ಪಾಲಿಕೆಗೆ ನೀಡುತ್ತಿರುವುದಾಗಿ ಮಾಹಿತಿ ನೀಡಿದರು. ಈ ಎಲ್ಲಾ ವಿವರಗಳನ್ನು ಕರಾರುಪತ್ರದ ಪ್ರತಿಗಳೊಂದಿಗೆ ಸಮಿತಿಗೆ ಸ್ಲಲಿಸಲು ಸದಸ್ಯರು ಸೂಚಿಸಿದರು.

ದಕ್ಷಿಣ ವಲಯಕ್ಕೆ ಸಂಬಂಧಿಸಿದಂತೆ ಹಾಜರಿದ್ದ ಮಾರುಕಟ್ಟೆ ವಿಭಾಗದವರು ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಟ್ಟು 28 ಮಾರಕಟ್ಟೆಗಳಿದ್ದು, ಒಟ್ಟು 1296 ಮಳಿಗೆಗಳು ಇದ್ದು ವಾರ್ಷಿಕ ರೂ.13.23ಕೋಟಿ ವಸೂಲಾತಿ ಗುರಿ ಇರುವುದಾಗಿ ತಿಳಿಸುತ್ತಾ ಡಿ.ಡಿ/ಚೆಕ್ ಮುಖಾಂತರ ಬಾಡಿಗೆಯನ್ನು ವಸೂಲು ಮಾಡುವುದಾಗಿ ತಿಳಿಸಿದರು. ಆಗ ಅಧ್ಯಕ್ಷರು ಮಾತನಾಡುತ್ತಾ ಎಷ್ಟು ಚೆಕ್‌ಗಳು ಬೌನ್ಸ್ ಆಗಿರುತ್ತವೆ, ಅವುಗಳನ್ನು ರಿ–ಕನ್ಸಿಲೀಯೇಷನ್ ಮಾಡಲಾಗಿದೆಯೇ, ಮಳಿಗೆಗಳಿಗೆ ಬಾಡಿಗೆಯನ್ನು ಯಾವ ಆಧಾರದ ಮೇಲೆ ನಿಗಧಿಪಡಿಸಲಾಗಿರುತ್ತದೆ ಎಂಬುದರ ವಿವರವನ್ನು ಕೇಳಿದಾಗ, ಬೌನ್ಸ್ ಆಗಿರುವ ಚೆಕ್ಕುಗಳನ್ನು ರಿ–ಕನ್ಸಿಲಿಯೇಷನ್ ಮಾಡುತ್ತಿರುವುದಾಗಿ, ಚದರ ಅಡಿ ಲೆಕ್ಕದಲ್ಲಿ ಮಳಿಗೆಗಳ ಬಾಡಿಗೆಯನ್ನು ನಿಗಧಿಪಡಿಸಿರುವುದಾಗಿ ಮಾಹಿತಿ ನೀಡಿದರು

ನಂತರ ಹಾಜರಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಲೆಕ್ಕಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಈಗಾಗಲೇ ಕ್ರಮ ಕೈಗೊಂಡಿರುವುದಾಗಿ ಕೆಲವೊಂದು ಆಕ್ಷೇಪಣಾ ಮೊತ್ತಕ್ಕೆ ವರದಿಯನ್ನು ಸಲ್ಲಿಸಿದ್ದು, ಇನ್ನುಳಿಕೆ ಆಕ್ಷೇಪಣೆ ಮೊತ್ತಕ್ಕೆ ಉತ್ತರವನ್ನು ಸಲ್ಲಿಸುವ ಮತ್ತು ವಸೂಲಾತಿ ಮೊತ್ತ ಸಂಗ್ರಹಿಸುವ ಕಾರ್ಯವು ಪ್ರಗತಿಯಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಎಲ್ಲಾ ಮಾಹಿತಿಗಳನ್ನು ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಅಧಿಕಾರಿ/ಸಿಬ್ಬಂದಿಗಳು ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಅಸಡ್ಡೆ ಮನೋಭಾವವನ್ನು ತೋರದೆ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕೆಂದು, ಈ ನಿಟ್ಟಿನಲ್ಲಿ ಸಮಿತಿಯು ಮುಂಬರುವ ದಿನಗಳಲ್ಲಿ ತಪಾಸಣೆಯನ್ನು ಹಮ್ಮಿಕೊಳ್ಳುವುದಾಗಿ ತಿಳಿಸುತ್ತಾ, ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.

2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.

3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.

5.ವಿಶೇಷ ಆಯುಕ್ತರು(ಆಸ್ತಿಗಳು) ರವರಿಗೆ ಮಾಹಿತಿಗಾಗಿ ಕಳುಹಿಸಿದೆ

6.ಸಹಾಯಕ ಆಯುಕ್ತರು (ಮಾರುಕಟ್ಟೆ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ

7.ಎಲ್ಲಾ ವಲಯ ಸಹ ಕಂದಾಯ ಅಧಿಕಾರಿ (ಮಾರುಕಟ್ಟೆ) ರವರುಗಳಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ

8.ಕಛೇರಿ ಕಡತಕ್ಕೆ